ದಿನಾಂಕ : 11-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ ಶ್ರೀ.ಯು.ಬಿ.ಜಿ ವಕೀಲರಿಂದಃ**

13. ಸಿ.ಪಿ.ಐ ರವರು ಮತ್ತು ಡಿ.ವೈ.ಎಸ್.ಪಿ ಅವರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ದಿನಾಂಕಃ 06-10-2015 ರಂದು ಕೃತ್ಯ ನಡೆದ ಸ್ಥಳದಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಆಗ ಸುಮಾರು ಬೆಳಗ್ಗೆ 9:00 ಗಂಟೆ ಆಗಿತ್ತು. ಪೋಲಿಸರು ನನ್ನನ್ನು ಪೋನ ಮಾಡಿ ಕರೆಸಿದ್ದರು. ಪೋಲಿಸರು ಲ್ಯಾಪ್‌ಟಾಪ್ ನಲ್ಲಿ ನನ್ನ ಹೇಳಿಕೆಯನ್ನು ಟೈಪ್ ಮಾಡಿಕೊಂಡಿದ್ದಾರೆ. ಆ ದಿನ ನನ್ನೊಂದಿಗೆ ಫಿರೋಜ ಚೌಗಲಾ, ಪ್ರಭಾಕರ ಅಸೋದೆ, ದಿಲೀಪ ಅಸೋದ ಮತ್ತು ಚೆನ್ನಪ್ಪ ಇದ್ದರು.

14. ಘಟನಾ ಸಮಯದಲ್ಲಿ ನಾನು ರಾಜಕೀಯದಲ್ಲಿ ಇರಲಿಲ್ಲ. ಮೊರಬ ಗ್ರಾಮದಲ್ಲಿ ಸಾಕಷ್ಟು ಜನರು ನನಗೆ ಪರಿಚಯ ಇರುತ್ತಾರೆ ಎನ್ನುವುದು ಸರಿ. ಎಲ್ಲಾ ಸಮುದಾಯದ ಜನರು ನನ್ನ ಮಾತನ್ನು ಕೇಳುತ್ತಾರೆ ಎನ್ನುವುದಕ್ಕೆ ಸಾಕ್ಷಿ ಕೆಲವರು ಕೇಳುತ್ತಾರೆ ಎಂದು ಹೇಳಿದ್ದಾರೆ. ಚಾಸಾಃ 6 ಫಿರೋಜ ಚೌಗಲಾ ನನ್ನ ದೂರದ ಸಂಬಂಧಿ, ನನ್ನ ಕಾಸಾ ತಮ್ಮ ಅಲ್ಲ. ದಿನಾಂಕಃ 01-10-2015 ರಂದು ಸಂಜೆ 8:00 ಗಂಟೆಗೆ ನಾವು ಹಾರೂಗೇರಿಗೆ ಹೋಗಿದ್ದೇವು. ಹಾರೂಗೇರಿಯಿಂದ ಮೊರಬ ಸುಮಾರು 20-25 ಕಿಲೋಮೀಟರ ಅಂತರದಲ್ಲಿದೆ. ನಾವು ಅಂದರೆ ನಾನು ಮತ್ತು ಫಿರೋಜ ಚೌಗಲಾ ಖಾಸಗಿ ವಿಚಾರದಲ್ಲಿ ಹಾರೂಗೇರಿಗೆ ಹೋಗಿದ್ದೇನು. ನಾವು ಇಬ್ಬರೂ ಒಟ್ಟಿಗೆ ಹೋಗಿದ್ದೇವು,ಕೆಲಸ ಮುಗಿಸಿಕೊಂಡು ನಂತರ ಇಬ್ಬರೂ ಒಟ್ಟಿಗೆ ಬಂದಿದ್ದೇವೆ. ನಾವು ಹಾರೂಗೇರಿಗೆ 10:00 ಗಂಟೆಗೆ ಹೋಗಿದ್ದೇವೆ. ಮೋಟರಸೈಕಲನ್ನು ನಾನೇ ಚಲಾಯಿಸುತ್ತಿದ್ದೇನು. ಆ ಮೋಟರಸೈಕಲ ನನ್ನದೇ.

15. ನಾವು ಹಾರೂಗೇರಿ ರಾತ್ರಿ 11:00–11:10 ಗಂಟೆಗೆ ಬಿಟ್ಟಿದ್ದೇವೆ. ನಾವು ಮೊರಬಕ್ಕೆ ಬಂದಾಗ ರಾತ್ರಿ 12:00 ಗಂಟೆ ಆಗಿತ್ತು. ದಾರಿಯಲ್ಲಿ ಕೆಲವು ಕಡೆಗಳಲ್ಲಿ ದಾರಿದೀಪಗಳಿವೆ ಕೆಲವು ಕಡೆಗಳಲ್ಲಿ ಇರುವುದಿಲ್ಲ. ಘಟನಾ ಸ್ಥಳದ ಹತ್ತಿರ ದಾರಿದೀಪ ಇರುವುದಿಲ್ಲ, ಸುಮಾರು 30 ಅಡಿ ದೂರದಲ್ಲಿದೆ.

16. ಮೋಟರಸೈಕಲ ನಂಬರನ್ನು ನಾನು ಡಿ.ವೈ.ಎಸ್.ಪಿ ಅವರಿಗೆ ಹೇಳಿರುವುದಿಲ್ಲ ಎನ್ನುವುದಕ್ಕೆ ಸಾಕ್ಷಿ ಡಿ.ವೈ.ಎಸ್.ಪಿ ಅವರು ನನಗೆ ಕೇಳಿರುವುದಿಲ್ಲ ಆ ಕಾರಣ ನಾನು ಹೇಳಿರುವುದಿಲ್ಲ ಎಂದು ಹೇಳಿದ್ದಾರೆ. ಮೋಟರಸೈಕಲ ಮೇಲೆ ಬಂದ ವಿಚಾರವನ್ನು ನಾನು ಹೇಳಿದ್ದೇನೆ. ಡಿ.ವೈ.ಎಸ್.ಪಿ ಅವರು ಕೇಳಿದ್ದಕ್ಕೆ ಮಾತ್ರ ನೀವು ಉತ್ತರ ಹೇಳಿದ್ದಿರಾ ಎನ್ನುವುದಕ್ಕೆ ಸಾಕ್ಷಿಯು ನಾನು ಹೇಳಿದ್ದನ್ನು ಅವರು ಬರೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

17. ನನ್ನ ಮೋಟರಸೈಕಲನ ಬೆಳಕು ಘಟನಾ ಸ್ಥಳದ ಮೇಲೆ ಬಿಳುತ್ತಿತ್ತು, ಆದರೆ ಅಷ್ಟು ಸ್ಪಷ್ಟವಾಗಿ ಇರಲಿಲ್ಲ. ನನ್ನ ಮೋಟರಸೈಕಲನ ಬಲ್ಬ ಎಷ್ಟ ವ್ಯಾಟಿನದು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಮೋಟರಸೈಕಲನ ಬೆಳಕು ಸುಮಾರು 300 ಮೀಟರನವರೆಗೆ ಕಾಣುತ್ತಿತ್ತು.

18. 2ನೇ ಆರೋಪಿ ಲಗಮವ್ವ ಮೊದಲು ನನ್ನ ತಮ್ಮನ ಹೆಂಡತಿ ಆಗಿದ್ದು, ನನ್ನ ತಮ್ಮ ತೀರಿಕೊಂಡ ನಂತರ ಈಗ 1ನೇ ಆರೋಪಿಯನ್ನು ಮದುವೆ ಮಾಡಿಕೊಂಡಿದ್ದಾರೆ, ಆದರೆ ಯಾವಾಗ ಮದುವರೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಮ್ಮನ ಹೆಂಡತಿ 1ನೇ ಆರೋಪಿಯನ್ನು ಮದುವೆ ಮಾಡಿಕೊಂಡ ಕಾರಣ ಅದನ್ನು ನನಗೆ ಸಹಿಸಲು

ಆಗಲಿಲ್ಲ ಎನ್ನುವುದು ಸರಿಯಲ್ಲ. ಆ ಕಾರಣದಿಂದ ನಾನು ಅಣ್ಣಪ್ಪ ಮತ್ತು ಅವರ ಕುಟುಂಬದವರ ಮೇಲೆ ವೈಷಮ್ಯ ಹೊಂದಿದ್ದೇನೆ ಎನ್ನುವುದು ಸರಿಯಲ್ಲ.

19. ಚಾಸಾಃ 3 ಮಹಾದೇವ ಅಸೋದೆ, ಚಾಸಾಃ 1 ಪ್ರಭಾಕರ ಅಸೋದೆ ಇವರುಗಳು ರಾಜಕೀಯದಲ್ಲಿದ್ದು ನನ್ನ ಮಾತುಗಳನ್ನು ಕೇಳುತ್ತಿದ್ದು, ಸದರಿಯವರುಗಳು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರಿಂದ ಅವರ ಮುಖಾಂತರ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಆರೋಪಿತರ ವಿರುದ್ಧ ನಾನೇ ದೂರನ್ನು ತಯಾರು ಮಾಡಿ ಚಾಸಾಃ 1 ರವರಿಂದ ಸಹಿ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಘಟನೆ ಆಗಿದ್ದು ಸತ್ಯ ಇರುತ್ತದೆ, ನಾನು ಜಗಳ ಬಿಡಿಸಿದ್ದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎಂದು ಹೇಳಿದ್ದಾರೆ.

20. 1 ಮತ್ತು 4 ನೇ ಆರೋಪಿತರು ಘಟನಾ ಸಮಯದಲ್ಲಿ ನಾನು ಸ್ಥಳಕ್ಕೆ ಹೋದಾಗ ದೂರುದಾರರಿಗೆ ಜಾತಿ ಹೆಸರು ತೆಗೆದು ಬೈಯ್ಯುತ್ತಿದ್ದರು ಎಂದು ನಾನು ಸಾಕ್ಷಿಯಲ್ಲಿ ಹೇಳಿದ್ದೇನೆ, ಆದರೆ ಆ ವಿಚಾರವನ್ನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದಕ್ಕೆ ಸಾಕ್ಷಿ ನಾನು ಹೇಳಿದ್ದೇನೆ ಆದರೆ ಅವರು ಟೈಪ್ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

21. 11 ಜನ ಆರೋಪಿತರು ಘಟನಾ ಸ್ಥಳದಲ್ಲಿ ಇದ್ದು, ದೂರುದಾರರಿಗೆ ಮತ್ತು ಗಾಯಾಳುಗಳಿಗೆ ಹೊಡೆಯುತ್ತಿದ್ದುದನ್ನು ನಾನು ನೋಡಿದ್ದೇನೆ, ಬಿಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

22. ಬೆಳಗ್ಗೆ ಆದ ಘಟನೆಯ ವಿಚಾರವನ್ನು ಚಾಸಾಃ 1 ಪ್ರಭಾಕರ ಅವರು ಆರೋಪಿತರು ಸ್ಥಳದಿಂದ ಹೋದ ನಂತರ ನನಗೆ ಹೇಳಿದ್ದಾನೆ ಎಂದು ನಾನು ಸುಳ್ಳು

ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ಚಾಸಾಃ 6 ವೈಯಕ್ತಿಕ ಕೆಲಸದ ಮೇಲೆ ಹಾರೂಗೇರಿಗೆ ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾವು ಆ ರೀತಿ ಹೋಗಿಲ್ಲ ಆ ಕಾರಣ ಮೋಟರಸೈಕಲ ನಂಬರ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ ಶ್ರೀ.ಆರ್.ಸಿ.ಪಿ ವಕೀಲರಿಂದಃ**

23. ರಾಯಬಾಗ ಸಿವಿಲ್ ನ್ಯಾಯಾಲಯದಲ್ಲಿ ನನಗೂ ಮತ್ತು 1ನೇ ಆರೋಪಿ ಅಣ್ಣಪ್ಪ ಹಳಿಜೋಳೆ ಅವರಿಗೆ RA No.36/2009 ರಂತೆ ಪ್ರಕರಣ ಇತ್ತು ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಅದು ನನ್ನಂತೆ ತೀರ್ಮಾನ ಆಗಿದೆ ಎಂದು ಹೇಳಿದ್ದಾರೆ. ನನಗೂ ಮತ್ತು ಆರೋಪಿತರಿಗೂ ಸಾಕಷ್ಟು ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಇರುವ ಕಾರಣ ಅವರಿಗೆ ಹೆದರಿಸುವ ಸಲುವಾಗಿ ಚಾಸಾಃ 1 ರವರ ಮುಖಾಂತರ ಈ ಪ್ರಕರಣ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜಿ ವಕೀಲರಿಂದಃ**

ಶ್ರೀ.ಯು.ಬಿ.ಜಿ ವಕೀಲರು ಮತ್ತು ಶ್ರೀ.ಆರ್.ಸಿ.ಪಿ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಬೆಳಗಾವಿ.